ವಿಭಾಗಕ್ಕೆ ಸೆಪ್ಟೆಂಬರ್‌ರವರೆವಿಗೆ ಕೊಡಲಾದ ಹೊಸ ಬಸ್‌ಗಳ ಸಂಖ್ಯೆ.

ಬದಲಿಗಾಗಿ	...	೩೧ ಬಸ್‌ಗಳು
ವಿಸ್ತರಣೆಗಾಗಿ	...	೧೯ ಬಸ್‌ಗಳು
ಒಟ್ಟು		೫೦ ಬಸ್‌ಗಳು

ಮುಂಧೋಳದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ.

೧೩೨೪. ಶ್ರೀ ಬಾಬುರೆಡ್ಡಿ ವೆಂ. ತಂಗಳ (ಬೀಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕು ಕೇಂದ್ರವಾದ ಮುಂಧೋಳದಲ್ಲಿ ಹೊಸ ಬಸ್ ನಿಲ್ದಾಣದ ಕಾರ್ಯ ನಿರ್ಮಾಣಕ್ಕೆ ಟೆಂಡರ್ ಕರೆದದ್ದು ಯಾವಾಗ ?

ಆ) ಕಾನೂನಿನಂತೆ ಟೆಂಡರ್ ಕರೆದು ನಿರ್ಮಾಣ ಕಾರ್ಯ ಆರಂಭವಾಗಿ ೩ ವರ್ಷಗಳಾದರೂ ಇನ್ನೂ ಪ್ರಗತಿ ಪರವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಅದು ನಿರ್ಮಾಣ ಅಂತದಲ್ಲಿದ್ದಾಗಲೇ ಒಂದು ಸಲ ಕಂಪಿದು ಬಿದ್ದಿರುವುದಂ ಸರ್ಕಾರಕ್ಕೆ ತಿಳಿದಿದೆಯೇ ?

ಈ ಹಾಗಿದ್ದಲ್ಲಿ ಸದರೀ ಕೆಲಸ ಪೂರ್ಣಗೊಂಡು ಉದ್ಘಾಟನೆಯಾಗಲು ಇನ್ನೂ ಎಷ್ಟು ಅವಧಿಬೇಕು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ಮಂತ್ರಿಗಳು).—

ಅ) ದಿನಾಂಕ ೨೪–೧೦–೧೯೮೧ ರಲ್ಲಿ.

ಆ) ಬಂದಿದೆ.

ಇ) ತಿಳಿದಿದೆ ಹಿಂದಿನ ಬಸ್ ನಿಲ್ದಾಣವನ್ನು ಬೇರ್ಪಡಿಸಲು ನಿರ್ಮಿಸಿದ ಮಂಧ್ಯಂತರ ಗೋಡೆಯ ಕೆಲವು ಭಾಗವನ್ನು ತಿಳಿಗೇಡಿಗಳು ರಾತ್ರಿ ವೇಳೆಯಲ್ಲಿ ಹಾನಿಗೊಳಪಡಿಸಿದ್ದರು.

ಇ) ಬಸ್‌ನಿಲ್ದಾಣ ಕಾರ್ಯ ಪೂರ್ಣಗೊಂಡಿರುವುದರಿಂದ ಶೀಘ್ರದಲ್ಲೇ ಉದ್ಘಾಟಿಸಲಾಗುವುದು.

ಜಮಖಂಡಿ ಉಪ ವಿಭಾಗದಲ್ಲಿರುವ ನಗರಗಳಿಗೆ ವರ್ತಂಲ ಬಸ್ಸುಗಳನ್ನು ಓಡಿಸುವುದು.

೧೩೨೫. ಶ್ರೀ ಬಿ. ವಿ. ತಂಗಳ (ಬೀಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಜಮಖಂಡಿ ಉಪ ವಿಭಾಗದಲ್ಲಿರುವ ಜಮಖಂಡಿ ರಬಕವಿ, ಬನಹಟ್ಟಿ, ಮಹಾಲಿಂಗಪುರ ಹಾಗೂ ತೇರದಾಳ್, ಮುಧೋಳ ನಗರಗಳು ಔದ್ಯಮಿಕ ನಗರಗಳಾಗಿ ಬೆಳೆಯುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ ಅತ್ಯಂತ ಜನದಟ್ಟಣೆಯಿರುವ ಈ ನಗರಗಳಿಗೆ ಪ್ರಯಾಣಿಕರ ಅನುಕೂಲಕ್ಕಾಗಿ ಈ ನಗರಗಳಿಗೆ ಅನ್ವಯಿಸುವಂತೆ ಪ್ರತಿ ಗಂಟೆಗೊಂದಾವರ್ತಿ (ವರ್ತ್ಯಂಲ) ಸಿಟಿ ಬಸ್‌ಗಳನ್ನು ಓಡಿಸುವ ಆಲೋಚನೆ ಏನಾದರೂ ಇದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ತೀವ್ರ ಕ್ರಮ ಕೈಗೊಂಡು ಜಮಖಂಡಿ ಡಿಪೋಕ್ಕೆ ಎಷ್ಟು ಬಸ್ಸುಗಳನ್ನು ಒದಗಿಸಲಾಗುವುದು ಹಾಗೂ ಯಾವಾಗ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ಮಂತ್ರಿಗಳು).—

ಅ)ಬಂದಿದೆ.

ಆ) ಇಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.